# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 236
2. ಸದಸ್ಯರ ಹೆಸರು : ಶ್ರೀ ಮಧು ಜಿ. ಮಾದೇಗೌಡ
3. ಉತ್ತರಿಸಬೇಕಾದ ದಿನಾಂಕ : 06.07.2023
4. ಉತ್ತರಿಸಬೇಕಾದ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| (ಅ) | ಮಂಡ್ಯ ಜಿಲ್ಲೆಯಲ್ಲಿರುವ ವಿವಿಧ ನಾಲೆಗಳ (ಮುಖ್ಯ ನಾಲೆ ಮತ್ತು ಉಪ ನಾಲೆ) ಉದ್ದ ಮತ್ತು ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿ ಎಷ್ಟು; | ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ. |
| (ಆ) | ಮುಖ್ಯ ನಾಲೆ ಮತ್ತು ಉಪ ನಾಲೆಗಳನ್ನು ಆಧುನೀಕರಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; | ಹೌದು. |
| (ಇ) | ಪ್ರತಿ ಬಾರಿ ಕಡೆ ಭಾಗದ ಜಮೀನುಗಳಿಗೆ ನೀರು ತಲುಪದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ನಾಲೆಗಳ ಖಾರೀಫ್ ಪೂರ್ವ ಅವಧಿಯಲ್ಲಿ (ಕ್ಲೋಸರ್ ಪಿರಿಯಡ್) ಅವಧಿಯಲ್ಲಿ ನಾಲೆ, ಗೇಟ್, ಸ್ಲೂಯಿಸ್ ಮತ್ತು ತೂಬುಗಳ ತುರ್ತು ನಿರ್ವಹಣೆ ಕಾಮಗಾರಿಗಳನ್ನು ತೆಗೆದುಕೊಂಡು ನಾಲೆಗಳ ಕೊನೆಭಾಗದ ಅಚ್ಚುಕಟ್ಟು ಪ್ರದೇಶಕ್ಕೆ ಹಾಗೂ ಕೆರೆಗಳಿಗೆ ಸಮರ್ಪಕವಾಗಿ ನೀರು ಹರಿಸಲು ಕ್ರಮವಹಿಸಲಾಗುತ್ತಿದೆ. |
| (ಈ) | ಬಂದಿದ್ದಲ್ಲಿ ನಾಲೆಗಳ ಕಡೇ ಭಾಗಕ್ಕೆ ನೀರನ್ನು ಹರಿಸಲು ಅನುಕೂಲವಾಗುವಂತೆ ಕೈಗೊಂಡಿರುವ ಕ್ರಮಗಳೇನು; | |
| (ಉ) | ಕೆ.ಆರ್.ಎಸ್. ಅಣೆಕಟ್ಟೆಯ ಗೇಟ್‌ಗಳ ನವೀಕರಣ / ಬದಲಾವಣೆ ಕಾರ್ಯ ಕೈಗೆತ್ತಿಕೊಳ್ಳಲಾಗಿದೆಯೇ; ಇದಕ್ಕಾಗಿ ಎಷ್ಟು ವೆಚ್ಚ ಭರಿಸಲಾಗಿದೆ; (ವಿವರ ನೀಡುವುದು) | ಕೆ.ಆರ್.ಎಸ್. ಅಣೆಕಟ್ಟೆಯ ಎಲ್ಲಾ ಗೇಟ್‌ಗಳ ನವೀಕರಣ/ಬದಲಾವಣೆ ಕಾರ್ಯವನ್ನು ರೂ.69.52 ಕೋಟಿ ಅಂದಾಜು ಮೊತ್ತದಲ್ಲಿ ಕೈಗೊಳ್ಳಲಾಗಿರುತ್ತದೆ. |
| (ಊ) | ಕೆ.ಆರ್.ಎಸ್ ಅಣೆಕಟ್ಟೆಗೆ ಅಳವಡಿಸಿರುವ ಸ್ವಯಂಚಾಲಿತ ಗೇಟ್‌ಗಳನ್ನು ಯಾಂತ್ರೀಕೃತ ಗೇಟ್‌ಗಳನ್ನಾಗಿ ಪರಿವರ್ತಿಸುವ ಕಾರ್ಯ ನಡೆದಿದೆಯೇ; (ಸಂಪೂರ್ಣ ಮಾಹಿತಿ ನೀಡುವುದು) | ಕೆ.ಆರ್.ಎಸ್ ಅಣೆಕಟ್ಟೆಯಲ್ಲಿ ಅಳವಡಿಸಿರುವ ಸ್ವಯಂಚಾಲಿತ ಗೇಟುಗಳನ್ನೂ ಒಳಗೊಂಡಂತೆ ಎಲ್ಲಾ ಗೇಟ್‌ಗಳಿಗೆ SCADA ವ್ಯವಸ್ಥೆಯನ್ನು ಅಳವಡಿಸಿ, ಗೇಟ್‌ಗಳನ್ನು ಯಾಂತ್ರೀಕೃತ (Automation) ಗೇಟ್‌ಗಳನ್ನಾಗಿ ಪರಿವರ್ತಿಸಲು ಅಗತ್ಯ ಕ್ರಮ ವಹಿಸಲಾಗುತ್ತಿದೆ. |
| (ಋ) | ಕೆ.ಆರ್.ಎಸ್ ಅಣೆಕಟ್ಟೆಯಲ್ಲಿ ಇರಬಹುದಾದ ಹೂಳು ಪ್ರಮಾಣ ಎಷ್ಟು; ಈ ಬಗ್ಗೆ ಅಧ್ಯಯನ ನಡೆದಿದೆಯೇ; ಹಾಗೂ ಹೂಳು ಮೇಲೆತ್ತುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? | 2013-14ನೇ ಸಾಲಿನಲ್ಲಿ ಕೆ.ಆರ್.ಎಸ್ ಅಣೆಕಟ್ಟೆಯ ಹೂಳಿನ ಪ್ರಮಾಣದ ಕುರಿತು ಅಧ್ಯಯನ ನಡೆಸಿದ್ದು, ಜಲಾಶಯದಲ್ಲಿ 4.02 ಟಿ.ಎಂ.ಸಿ (113.75 M.Cum) ಹೂಳು ಶೇಖರಣೆಗೊಂಡಿರುತ್ತದೆ. ಹೂಳಿನ ಪ್ರಮಾಣವು ಕಡಿಮೆ ಇರುವ ಹಿನ್ನೆಲೆಯಲ್ಲಿ ಹೂಳು ಮೇಲೆತ್ತುವ ಪ್ರಸ್ತಾವನೆ ಇರುವುದಿಲ್ಲ. |

***ಸಂಖ್ಯೆ: ಜಸಂಇ 42 ಎನ್‌ಎಲ್‌ಎ 2023***

( ಡಿ. ಕೆ. ಶಿವಕುಮಾರ್ )
ಉಪ ಮುಖ್ಯಮಂತ್ರಿಗಳು

ಅನುಬಂಧ

## ಮಂಡ್ಯ ಜಿಲ್ಲೆಯಲ್ಲಿ ಕಾವೇರಿ ನೀರಾವರಿ ನಿಗಮದ ವ್ಯಾಪ್ತಿಯಲ್ಲಿ ವಿವಿಧ ಯೋಜನೆಗಳ ಅಡಿಯಲ್ಲಿ ಬರುವ ನಾಲೆಗಳ ವಿವರಗಳು

| ನಾಲೆಯ ಹೆಸರು | ಮುಖ್ಯ ನಾಲೆಯ ಒಟ್ಟು ಉದ್ದ (ಕಿ.ಮೀನಲ್ಲಿ) | ಶಾಖಾ ನಾಲೆ / ವಿತರಣಾ ನಾಲೆಯ ಒಟ್ಟು ಉದ್ದ (ಕಿ.ಮೀ.ನಲ್ಲಿ) | ಅಚ್ಚುಕಟ್ಟು ಪ್ರದೇಶ (ಹೆಕ್ಟೇರ್‌ಗಳಲ್ಲಿ) |
|---|---|---|---|
| ಮೈಸೂರು ವಲಯದ ವಿಶ್ವೇಶ್ವರಯ್ಯ ನಾಲೆ | 491.78 | 1064.90 | 79909.80 |
| ತುಮಕೂರು ವಲಯದ ನಾಗಮಂಗಲ ಶಾಖಾ ನಾಲೆ (ಸರಪಳಿ:47.625 ಕಿ.ಮೀ – ಸರ.78.325 ಕಿ.ಮೀ | 30.70 | 122.90 | 22964.98 |
| ಗೊರೂರು ವಲಯದ ಹೇಮಾವತಿ ಎಡದಂಡೆ ನಾಲೆ | 110.70 | 403.16 | 70628.68 |
| ಒಟ್ಟು | 633.18 | 1590.96 | 173503.46 |